# SAMPLE PAPER FOR SUMMATIVE ASSESSMENT -II
## SECOND TERM

**SUB : KANNADA    CLASS – IX    M.MARKS: 80    TIME: 3 Hrs**

---

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು*
- *ವಿಭಾಗ–B (ಬರವಣಿಗೆ ಕೌಶಲ) : 14 ಅಂಕಗಳು*
- *ವಿಭಾಗ–C (ಅನ್ವಯಿಕ ವ್ಯಾಕರಣ) : 14 ಅಂಕಗಳು*
- *ವಿಭಾಗ–D (ಪಠ್ಯಗಳ ಅಧ್ಯಯನ) : 40 ಅಂಕಗಳು*

---

## ವಿಭಾಗ–A (ವಾಚನ ಮತ್ತು ಗ್ರಹಿಕಾ ಕೌಶಲ) : (*12 ಅಂಕಗಳು*)

I.1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಜಗತ್ತು ಪೂಜಿಸುವುದು ಶಕ್ತಿಯನ್ನು, ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಕ್ರಿಕೆಟ್ ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಸಹಸ್ರಾರು ಯುವಕರು ಚಪ್ಪಾಳೆ ತಟ್ಟಿ, ಹುಚ್ಚೆದ್ದು ಕುಣಿದು ಅವನನ್ನು ಹೆಗಲ ಮೇಲೇರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ? ಅದು ಅವನ ಶಕ್ತಿ ಸಾಮರ್ಥ್ಯ, ದಕ್ಷತೆಗಳಿಗೆ ಸಲ್ಲಿಸಿದ ಗೌರವವಲ್ಲವೇ? ಶಕ್ತಿಯನ್ನು ಎಲ್ಲರು ಭಕ್ತಿ ಗೌರವಗಳಿಂದ ನೋಡುತ್ತಾರೆ. 'ಶಕ್ತನಾದರೆ ನಂಟರೆಲ್ಲಾ ಹಿತರು, ಅಶಕ್ತನಾದರೆ ಆಪ್ತ ಜನರೆ ವೈರಿಗಳು' ಎಂದು ಪುರಂದರ ದಾಸರು ಹೇಳಿದ ಮಾತು ಎಷ್ಟು ಸತ್ಯ! ತಂದೆ ತಾಯಿಯರು ಪ್ರೀತಿಯಿಂದ ಸಾಕಿ ಸಲಹಿದ ಮಗು ಬೆಳೆದು ದುರ್ಬಲನೂ, ರೋಗಿಷ್ಟನೂ, ದಡ್ಡನೂ, ಮೂರ್ಖನೂ ಆದರೆ ಏನೆನ್ನುವರು ಬಲ್ಲಿರಾ? "ಯಾಕಾಗಿ ಹುಟ್ಟಿದನಿವನು ಕುಲಕ್ಕೆ ಕಳಂಕ ಎನ್ನುವರಲ್ಲವೇ?" ಹೌದು ಶಕ್ತನಿಗೆ ಎಲ್ಲರೂ ಆಪ್ತರು . ಅಶಕ್ತನನ್ನು ಎಲ್ಲರು ತಿರಸ್ಕರಿಸುವರು, ಮೂಲೆಗೆ ತಳ್ಳುವರು. ಆದ್ದರಿಂದ ದೇಹ ಮನಸ್ಸು ಸರಿಯಾಗಿರುವ ನಾವು ದೈಹಿಕ ಮಾನಸಿಕ ಬೌದ್ಧಿಕ ಹಾಗು ನೈತಿಕ ಬಲಗಳ ಜೊತೆಗೆ ನಾವು ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. "ಶಕ್ತಿಯೇ ಜೀವನ ದುರ್ಬಲತೆಯೇ ಮರಣ" ಇದೊಂದು ದೊಡ್ಡ ಸತ್ಯ. ಆದ್ದರಿಂದಲೆ ಸ್ವಾಮಿ ವಿವೇಕಾನಂದರು ಬಲಿಷ್ಟರಾಗಿರಿ, ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲ ಇವುಗಳನ್ನು ಬೆಳೆಸಿಕೊಂಡು ನಿಮ್ಮ ಕಾಲಮೇಲೆ ನಿಲ್ಲಿ ಎಂದು ತಿರುತಿರುಗಿ ಸಾರಿದರು. ದುರ್ಬಲನು ತಾನು ನಾಶವಾಗುವುದಲ್ಲದೆ ಇತರರಲ್ಲಿ ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತಾನೆ. ನಮ್ಮ ಪರಂಪರೆ ನೀಡುವ ಮುಖ್ಯ ಬೋಧನೆಯೇ ಶಕ್ತಿಯನ್ನು ಬೆಳೆಸಿಕೊಳ್ಳಿ ಎಂಬುದು. ನಿರ್ವೀರ್ಯನಾಗಬೇಡ. ದುರ್ಬಲನಾಗಬೇಡ ಎಂದು ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ.

ಪ್ರಶ್ನೆಗಳು–

ಅ. ಯುವಕರು ಏನನ್ನು ತಿಳಿದಿರಬೇಕು? 1

ಆ. ಶಕ್ತಿಯ ಬಗ್ಗೆ ಪುರಂದರದಾಸರು ಹೇಳಿದ ಮಾತೇನು? 2

ಇ. ಮಗ ದುರ್ಬಲನಾದರೆ ತಂದೆ ತಾಯಿ ಏನನ್ನುವರು? 1

ಈ. ಶಕ್ತಿಯ ಬಗ್ಗೆ ವಿವೇಕಾನಂದರು ಹೇಳಿದ ಮಾತೇನು? 2

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಊರೆಲ್ಲ ನಂಟರು ಹಣದ ಗಂಟಿದ್ದರೆ
ಕುಣಿದು ಕುಂಬಿಡುವುದು ಜಗವು
ರೊಟ್ಟಿಯ ತುಣುಕೊಂದು ಕೈಯೊಳಗಿದ್ದರೆ
ನಾಯಿಗಳಾರೇಳು ಬಹವು

ಮಣ್ಣನ್ನು ನೆನೆಯಿಸಿದಷ್ಟಕ್ಕೆ ಕುಂಬಾರ
ನಾರೊಬ್ಬನೂ ಆಗಲಾರ
ಕುಡಿಕೆಗೆ ಬೇಕಷ್ಟೆ ಕೋಲು ಕೈಚಳಕವು
ಚಕ್ರವು ಬೆಂಕಿಯ ಕಾವು

ಬಾಳೆಯ ಹಣ್ಣನು ತಿಂದವರೆಸೆವರು
ಸಿಪ್ಪೆಯ ಬೀದಿಯ ಕೊನೆಗೆ
ಕಾಣದೆ ಕಾಲಿಟ್ಟು ಜಾರುವರನ್ಯರು
ಕಷ್ಟವು ಬರುವುದೇ ಹೀಗೆ

ನಾನೊಬ್ಬ ನಿದ್ರೆಯ ಮಾಡಿದೆನಾದರೆ
ಅದು ನನ್ನ ಒಬ್ಬನ ಸುಖಕೆ
ನಾನೊಬ್ಬನೆಚ್ಚತು ದುಡಿಯುವುದಾದರೆ
ಅದು ಊರಿನೆಲ್ಲರ ಹಿತಕೆ

ಎಸ್.ವಿ.ಪರಮೇಶ್ವರಭಟ್ಟ.

ಪ್ರಶೆಗಳು:

ಅ) ಊರೆಲ್ಲ ನೆಂಟರು ಯಾವಾಗ ಆಗುವರು? 1

ಆ) ಕಷ್ಟವು ಹೇಗೆ ಬರುವುದು? 2

ಇ) ಕುಡಿಕೆ ತಯಾರಿಸಲು ಏನೇನು ಬೇಕು? 1

ಈ) ಊರವರ ಹಿತ ಯಾವುದರಲ್ಲಿದೆ? 2

## ವಿಭಾಗ-B (ಬರವಣಿಗೆ ಕೌಶಲ) : (14 ಅಂಕಗಳು)

II. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ೧೫೦ ಪದಗಳಿಗೆ ಮೀರದಂತೆ ನಿಬಂಧ ಬರೆಯಿರಿ. 6

೧. ನನ್ನ ಮೆಚ್ಚಿನ ಹವ್ಯಾಸ. ೨. ರಾಷ್ಟ್ರೀಯ ಹಬ್ಬಗಳು. ೩. ಗ್ರಂಥಾಲಯಗಳ ಮಹತ್ವ

III. ನೀವು ನೋಡಿದ ಸರ್ಕಸ್ಸಿನಲ್ಲಿ ಯಾವುದು ನಿಮ್ಮನ್ನು ವಿಶೇಷವಾಗಿ ಸಂತೋಷಪಡಿಸಿತು ಎಂಬುದರ ಬಗ್ಗೆ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ. 4

IV. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. 4

ಹವ್ಯಾಸ ಎಂಬುದು ಸಂಜೀವಿನಿ ಇದ್ದಂತೆ. ಬಿಡುವಿನ ವೇಳೆಯ ಸದುಪಯೋಗಕ್ಕೆ ಸಕ್ರಿಯೆಯಾಗಿ ಸಹಾಯಕವಾಗುವಂಥದ್ದು. ಯಾವ ವ್ಯಕ್ತಿ ತನ್ನನ್ನು ತಾನು ಹವ್ಯಾಸದಲ್ಲಿ ತೊಡಗಿಸಿಕೊಂಡಿರುತ್ತಾನೋ ಅವನಿಗೆ ಒಂಟಿತನವು ಕಾಡದೆ, ಅವನ ಮನಸ್ಸಿನ ಭಾವನೆ, ಸುಪ್ತಪ್ರತಿಭೆ ಬೆಳಕಿಗೆ ಬರಲು ಸಹಾಯಕವಾಗುತ್ತದೆ, ಎಂಬುದಾಗಿ ಜಿಮ್ ತೋರ್ಪೆಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಿಡುವಿನ ವೇಳೆಯಲ್ಲಿ ಆಸಕ್ತಿಯಿಂದ ಮಾಡುವಂಥ ಹಾಗೂ ಲಾಭದಾಯಕವಾಗುವಂಥ ಅಭ್ಯಾಸದಲ್ಲಿ ನಮ್ಮನ್ನು ನಾವೇ ತೊಡಗಿಸಿಕೊಳ್ಳುವಿಕೆಯನ್ನು ಹವ್ಯಾಸ ಎನ್ನುತ್ತೇವೆ. ಉದಾಹರಣೆಗೆ- ಅಂಚೆಚೀಟಿ ಸಂಗ್ರಹ, ನಾಣ್ಯ ಸಂಗ್ರಹ, ನೃತ್ಯ, ಚಿತ್ರಕಲೆ, ಸಾಹಿತ್ಯ, ಕ್ರೀಡೆ, ಓದು ಇತ್ಯಾದಿಗಳು. ನಿರ್ದಿಷ್ಟವಾಗಿ ಹೇಳುವುದು ಕಷ್ಟವಾದರೂ ಕೆಲವು ಹವ್ಯಾಸಯುಕ್ತ ಚಟುವಟಿಕೆಗಳು ಹಳೆಯ ಶಿಲಾಯುಗದಲ್ಲಿಯೇ ಆರಂಭವಾದವು ಎಂದು ಆ ಯುಗಕ್ಕೆ ಸಂಬಂಧಿಸಿದ ಪಳೆಯುಳಿಕೆಗಳಾದ ಕಲ್ಲಿನ ಮೇಲೆ ಕೆತ್ತಿರುವ ಚಿತ್ರಗಳು ಮತ್ತು ಮಡಿಕೆಯ ಮೇಲೆ ರಾರಾಜಿಸುವ ಕಲಾಕೃತಿಯಿಂದಲೇ ಹೇಳಬಹುದು. ಅಂದಿನಿಂದ ಇಂದಿನವರೆಗೂ ನವನವೀನವಾಗಿ ಹವ್ಯಾಸಗಳು ಬೆಳೆಯುತ್ತಲೇ ಇವೆ. ಹವ್ಯಾಸಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವರ್ಗೀಕರಿಸಿದ್ದಾರೆ. ೧.ವಸ್ತುಗಳ ಸಂಗ್ರಹಣೆ. ೨. ಕಲಿಕೆ. ೩. ವಸ್ತುಗಳ ತಯಾರಿಕೆ.

## ವಿಭಾಗ-C (ಅನ್ವಯಿಕ ವ್ಯಾಕರಣ) : (14 ಅಂಕಗಳು)

V. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

1.ಆವರಣದಲಿ ಕೊಟ್ಟಿರುವ ಪದವನ್ನು ಭವಿಷ್ಯತ್ ಕಾಲದಲ್ಲಿ ಪ್ರಯೋಗಿಸಿ ವಾಕ್ಯ ಪೂರ್ಣ ಮಾಡಿ. 1

ಭೂಮಿಕಾ ಆಟವನ್ನು----( ಆಡು)

2. ಕೆಳಗಿನ ಪದಗಳನ್ನು ಜೋಡಿಸಿ ಅರ್ಥಪೂರ್ಣ ವಾಕ್ಯವನ್ನಾಗಿ ಮಾಡಿ. 1

ಸಾವಿಗೆ ತನ್ನ ಕಂಸನ ಕಾರಣನಾದನು ಸೋದರ ಮಾವ ಶ್ರೀಕೃಷ್ಣನು.

3.ಈ ಗಾದೆಯನ್ನು ಪೂರ್ಣಗೊಳಿಸಿ ಬರೆಯಿರಿ. 1

ಮಾಡಿದ್ದುಣ್ಣೋ ------ -------.

4. ಕೆಳಗಿನ ಪಡೆನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. 3

೧).ಬೆತ್ತದ ರುಚಿ ತೋರು. ೨).ಸಿಡಿದೇಳು. ೩).ಪಲಾಯನಮಾಡು

5. ನಿಮಗೆ ಬೇಕಾದ ಒಂದು ಗಾದೆ ಮಾತನ್ನು ವಿವರಿಸಿ. 2

೧. ಅತಿಯಾಸೆ ಗತಿ ಕೆಡಿಸಿತು.

೨. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ.

6. ಕೆಳಗಿನ ವಾಕ್ಯವನ್ನು ನಿಷೇಧಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. 1

ಬಳೆಗಾರ ಚನ್ನಯ್ಯ ಊರಿನಿಂದ ಬರುವನು.

7. ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ . 1

ಭಯವು ಮನುಷ್ಯನನ್ನು ದೀನನನ್ನಾಗಿ ಮಾಡುತ್ತದೆ.

8. ಕೆಳಗಿನ ವಾಕ್ಯವನ್ನು ಭೂತ ಕಾಲದ ವಾಕ್ಯಕ್ಕೆ ಪರಿವರ್ತಿಸಿ. 1

ಸಾವಿತ್ರಿ ತನ್ನ ಮಗನಿಗೆ ಸಾಂತ್ವನ ಹೇಳುವಳು.

9. 'ಮಗು ಶಾಲೆ ಬಿಟ್ಟೊಡನೆ ಮನೆಗೆ ತೆರಳಿತೆ ?– ಈ ವಾಕ್ಯದಲ್ಲಿ ಇರುವ ಪ್ರಶ್ನಾರ್ಥಕ ಕ್ರಿಯಾಪದವನ್ನು ಗುರುತಿಸಿ ಬರೆಯಿರಿ. 1

10. ತಿಂದನು – ಈ ಪದದ ನಿಷೇಧಾರ್ಥಕ ರೂಪವಿದು. 1

೧) ತಿಂದಾನು. ೨) ತಿನ್ನನು. ೩) ತಿನ್ನುತ್ತಾನೆ ೪) ತಿನ್ನುವನು

11. 'ಮೆಚ್ಚಿದನು' ಈ ಪದದ ವರ್ತಮಾನ ಕಾಲದ ರೂಪ. 1

೧. ಮೆಚ್ಚಲಿಲ್ಲ. ೨) ಮೆಚ್ಚುವನು. ೩) ಮೆಚ್ಚುತ್ತಾನೆ. ೪) ಮೆಚ್ಚಬಹುದು.

## ವಿಭಾಗ–D (ಪಠ್ಯಗಳ ಅಧ್ಯಯನ) : *(40 ಅಂಕಗಳು)*

VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ದಶರಥನ ಅರಮನೆಗೆ ಬಂದ ಋಷಿ.

೧)ವಶಿಷ್ಠ ೨)ಗೌತಮ ೩)ವಿಶ್ವಾಮಿತ್ರ ೪)ವಾಲ್ಮೀಕಿ

2) ಐಫಿಲ್ ಟವರ್ ಈ ನದಿಯ ದಂಡೆಯಲ್ಲಿದೆ

೧) ಸೀನ್ ೨ ಥೇಮ್ಸ್ ೩) ನೈಲ್ ೪) ಗಂಗಾ

3) ಭಾಂವ್ರಿದೇವಿಗೆ ಬಾಂಬೆ ಸರ್ಕಾರ ನೀಡಿದ ಪ್ರಶಸ್ತಿ ಇದು.

೧) ಸಾಥಿನ್ ೨) ನೀರ್ಜಾ ಭನೋಟ್ ೩)ನೋಬೆಲ್ ೪) ವೀರವನಿತೆ.

4) 1993 ರಲ್ಲಿ ಮಹಾರಾಷ್ಟ್ರದ ಈ ಜಿಲ್ಲೆಯಲ್ಲಿ ಭೂಕಂಪ ಸಂಭವಿಸಿತು.

೧) ಪೂನಾ ೨) ಸಾಂಗ್ಲಿ ೩) ಸತಾರಾ ೪) ಲಾತೂರ್.

5) ಮುದ್ದಣನಿಗೆ ಇದ್ದ ಬಿರುದು :

೧) ವರಕವಿ ೨) ಕವಿಚಕ್ರವರ್ತಿ ೩) ಕಬ್ಬಿಗರ ಬಲ್ಲಹ ೪) ಪದ್ಮಶ್ರೀ

6) ಸುಧಾಮೆಯನ್ನು ಮೊಸಳೆಯಿಂದ ಬಿಡಿಸಿದವನು.

೧) ಸುದತ್ತ ೨) ಧನದತ್ತ ೩) ವಸುದತ್ತ ೪) ದೇವದತ್ತ

7) ಮಾನವೀಯತೆ ಇಲ್ಲಿ ಮೌನವಾಗಿ ಮಲಗಿದೆ.

೧) ಮನೆಯೊಳಗೆ ೨) ಮನೆ ಹೊರಗಡೆ ೩) ಬೀದಿಯ ಬದಿಯಲ್ಲಿ ೪) ನಡುಬೀದಿಯಲ್ಲಿ

8) ಜನರು ಚಿಗುರು ಚಿನ್ನದ ನಡುವೆ ಇದನ್ನು ಬಯಸುತ್ತಾರೆ.

೧) ಹಣ್ಣನ್ನು ೨) ಹೂವನ್ನು ೩) ಕಾಯಿಯನ್ನು ೪) ಬೀಜವನ್ನು.

9) ಒಮ್ಮೆಲೆ ಈ ಗಾಳಿ ಬೀಸಿ ಬಂತು :

೧) ಬಡಗಣ ಗಾಳಿ ೨) ಮೂಡಣಗಾಳಿ ೩) ತೆಂಕಣಗಾಳಿ ೪) ಪಡುವಣಗಾಳಿ

10) ಡಾಂಭಿಕ ಭಕ್ತನು ಈ ಕಾಲದಲ್ಲಿ ಏಳುವನು.

೧) ಸಂಧ್ಯಾಕಾಲ ೨) ಉದಯಕಾಲ ೩) ರಾಹುಕಾಲ ೪) ಭೂತಕಾಲ

11) ಕಲಾವಿದ ಬರೆದ ಚಂದ್ರ ಬಿಂಬ ಹೀಗೆ ಕಾಣುತ್ತಿತ್ತು.

೧) ಗೋಲಿಯಂತೆ ೨) ಬುಗುರಿಯಂತೆ ೩) ಚೆಂಡಿನಂತೆ ೪) ಬೆಣ್ಣೆಯಂತೆ.

12) ಅಲ್ಲಮಪ್ರಭುವಿನ ವಚನಗಳ ಅಂಕಿತವಿದು :

೧) ಮಹೇಶ್ವರ ೨) ಗುಹೇಶ್ವರ ೩) ರಾಮನಾಥ ೪) ನಂಜುಂಡೇಶ್ವರ

13) ಮುದ್ದಣ ಮನೋರಮೆಯರ ಸರಸ ಸಲ್ಲಾಪವು ಈ ಕಾಲದಲ್ಲಿ ನಡೆಯಿತು:

೧) ಮಳೆಗಾಲ. ೨) ಬೇಸಿಗೆಕಾಲ. ೩) ಚಳಿಗಾಲ. ೪) ವಸಂತಕಾಲ.

14) ಹರಿಗ ಎಂದರೆ ಇವನು :

೧) ಧರ್ಮರಾಜ. ೨) ಶ್ರೀಕೃಷ್ಣ ೩) ಅರ್ಜುನ. ೪)ಭೀಮ.

VII. ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 3*6=18

1) ವಶಿಷ್ಠನು ದಶರಥನನ್ನು ಹೇಗೆ ಸಂತೈಸಿದನು ?

2) ಪ್ಯಾರಿಸ್ ನಗರ ಹಿಗ್ಗಿ ಬೆಳೆದರು ಆಯತಪ್ಪಿ ಬೆಳೆದಿಲ್ಲ ಏಕೆ ? ವಿವರಿಸಿ.

3) ಸಂದರ್ಭದೊಂದಿಗೆ ವಿವರಿಸಿ.

ಬಳಲಿದಿರಿ ಪಾಪ ಬನ್ನಿರಿ ಒಳಗೆ ವಿಶ್ರಮಿಸಿ.

ಅಥವಾ

ಸತ್ಯಕ್ಕೆ ಜಯವೆಂಬ ನಿನ್ನ ವಾಕ್ಯ ಏನಾಯಿತಿಂದು ?

4) ಕಾಲಗಳ ಬಗೆಗೆ ಜನರ ಟೀಕೆಗಳೇನು?

5) ಪಂಚಭೂತಗಳನ್ನು ಅತಿಗಳೆದರೆ ಏನಾಗುತ್ತದೆ ಎಂದು ಅಲ್ಲಮ ತಿಳಿಸಿದ್ದಾನೆ ?

6) ಸಂದರ್ಭದೊಂದಿಗೆ ವಿವರಿಸಿ.

ಇರುವವರೆಗೆ ಇದೆಲ್ಲ ಇದ್ದದ್ದೇ

ಅಥವಾ

ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

VIII. ಕೆಳಗಿನ ಪ್ರಶ್ನೆಗಳಿಗೆ ೮-೧೦ ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4*2=8

1) ಭಾಂವ್ರಿದೇವಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಅಥವಾ

ಸುದಾಮೆ ತನ್ನ ಸತ್ಯವಾದಿತನವನ್ನು ಪ್ರದರ್ಶಿದ ಬಗೆಯನ್ನು ವಿವರಿಸಿ.

2) ಉದರ ವೈರಾಗಿಯು ತನ್ನ ಭಕ್ತಿಯನ್ನು ಹೇಗೆ ಪ್ರದರ್ಶಿಸುತ್ತಾನೆ ಎಂಬುದನ್ನು ವಿವರಿಸಿ.

ಅಥವಾ

ಭೀಷ್ಮನಿಗೆ ಸೇನಾಧಿಪತಿ ಪಟ್ಟ ಕಟ್ಟಿದ ಸಂದರ್ಭದಲ್ಲಿ ದ್ರೋಣ ಹಾಗೂ ಕರ್ಣರ ನಡುವೆ ನಡೆದ ಘರ್ಷಣೆಯನ್ನು ವಿವರಿಸಿ.